**National**
**Kannada**
**09.04.2025 19.35 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

1. ಸ್ಲೋವೊಕಿಯಾ ಅಧ್ಯಕ್ಷರೊಂದಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ನಿಯೋಗ ಮಟ್ಟದ ಮಾತುಕತೆ
2. ಫ್ರಾನ್ಸ್‌ನಿಂದ ೨೬ ರಫೇಲ್ ಸಾಗರಯುದ್ಧ ವಿಮಾನಗಳ ಖರೀದಿಗೆ ಭಾರತ ನಿರ್ಧಾರ
3. ತಿರುಪತಿ-ಪಕಲಾ-ಕಾಟ್ಪಾಡಿ ಮಾರ್ಗವನ್ನು ಜೋಡಿ ಹಳಿ ರೈಲು ಮಾರ್ಗವಾಗಿ ಪರಿವರ್ತಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ
4. ಐಪಿಎಲ್ ಟಿ-೨೦ ಕ್ರಿಕೆಟ್ : ಗುಜರಾತ್ ಟೈಟಾನ್ಸ್ ವಿರುದ್ಧ ಟಾಸ್ ಗೆದ್ದ ರಾಜಸ್ಥಾನ್ ರಾಯಲ್ಸ್ ಫೀಲ್ಡಿಂಗ್ ಆಯ್ಕೆ

<><><><>

ಸ್ಲೋವೊಕಿಯಾ ರಾಜಧಾನಿ ಬ್ರಾಟಿಸ್ಲಾವಾದಲ್ಲಿ ಇಂದು ಸ್ಲೋವೊಕಿಯಾ ಅಧ್ಯಕ್ಷ ಪೀಟರ್ ಪೆಲಿಗ್ರಿನಿ ಅವರೊಂದಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ನಿಯೋಗ ಮಟ್ಟದ ಮಾತುಕತೆ ನಡೆಸಿದರು. ಮಾತುಕತೆ ಸಂದರ್ಭದಲ್ಲಿ ಉಭಯ ನಾಯಕರು ದ್ವಿಪಕ್ಷೀಯ ಸಂಬಂಧಗಳ ವಿವಿಧ ಅಂಶಗಳು ಹಾಗೂ ಜಾಗತಿಕ ಮತ್ತು ಪ್ರಾದೇಶಿಕ ಹಿತಾಸಕ್ತಿಯ ವಿಷಯಗಳ ಕುರಿತು ಚರ್ಚಿಸಿದರು. ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಸ್ಲೋವೊಕಿಯಾ ಅಧ್ಯಕ್ಷರ ವೈಯಕ್ತಿಕ ಬದ್ಧತೆ ಮತ್ತು ಉಪಕ್ರಮವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಶ್ಲಾಘಿಸಿದರು. ಇದೇ ವೇಳೆ, ಉಭಯ ನಾಯಕರ ಉಪಸ್ಥಿತಿಯಲ್ಲಿ ಭಾರತ ಮತ್ತು ಸ್ಲೋವೊಕಿಯಾ ನಡುವೆ ಎಂಎಸ್ಎಂಇ, ಡಿಜಿಟಲ್ ತಂತ್ರಜ್ಞಾನ ಸೇರಿದಂತೆ ಪ್ರಮುಖ ವಿಷಯಗಳಲ್ಲಿ ಸಹಕಾರ ಕುರಿತು ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಭಾರತದ ವೇಗವಾಗಿ ವಿಸ್ತರಿಸುತ್ತಿರುವ ಮಾಧ್ಯಮ, ಮನರಂಜನೆ ಮತ್ತು ಸೃಜನಶೀಲ ಆರ್ಥಿಕ ಕ್ಷೇತ್ರಗಳಲ್ಲಿ ಉಭಯ ದೇಶಗಳು ಹೆಚ್ಚು ನಿಕಟವಾಗಿ ಸಹಕರಿಸಲು ಅಗಾಧ ಸಾಮರ್ಥ್ಯವನ್ನು ಹೊಂದಿವೆ. ಇದೇ ವರ್ಷ ಮೇ ೧ ರಿಂದ ೪ ರವರೆಗೆ ಮುಂಬೈನಲ್ಲಿ ನಡೆಯಲಿರುವ ವಿಶ್ವ ದೃಶ್ಯ, ಶ್ರವಣ ಮತ್ತು ಮನರಂಜನಾ ಶೃಂಗಸಭೆ-ವೇವ್ಸ್‌ನಲ್ಲಿ ಭಾಗವಹಿಸುವಂತೆ ಸ್ಲೋವೊಕಿಯಾ ಅಧ್ಯಕ್ಷರನ್ನು ಇದೇ ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಆಹ್ವಾನಿಸಿದರು. ೨೯ ವರ್ಷಗಳ ನಂತರ ಇದೇ ಮೊದಲ ಬಾರಿಗೆ ಭಾರತದ ರಾಷ್ಟ್ರಪತಿಯೊಬ್ಬರು ಸ್ಲೋವೊಕಿಯಾಗೆ ಭೇಟಿ ನೀಡಿದ್ದಾರೆ. ಇಂದು ಮುಂಜಾನೆ ಬ್ರಾಟಿಸ್ಲಾವಾಗೆ ಆಗಮಿಸಿದ ರಾಷ್ಟ್ರಪತಿಯವರನ್ನು ಸ್ಲೋವೊಕಿಯಾ ಅಧ್ಯಕ್ಷರು ಆತ್ಮೀಯವಾಗಿ ಬರಮಾಡಿಕೊಂಡರು. ಭೇಟಿಯ ಸಂದರ್ಭದಲ್ಲಿ ಸ್ಲೋವೊಕಿಯಾ ಪ್ರಧಾನಿ

ರಾಬರ್ಟ್ ಫಿಕೊ ಹಾಗೂ ಅಲ್ಲಿನ ಸಂಸತ್‌ನ ಸ್ಪೀಕರ್ ರಿಚರ್ಡ್ ರಾಸಿ ಅವರನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿಯಾಗಲಿದ್ದಾರೆ.

<><><><>

ಭಾರತವು ಫ್ರಾನ್ಸ್‌ನಿಂದ ೨೬ ರಫೇಲ್ ಸಾಗರ ಯುದ್ಧ ವಿಮಾನಗಳನ್ನು ಖರೀದಿಸಲು ಮುಂದಾಗಿದೆ. ಮುಂದಿನ ವಾರಗಳಲ್ಲಿ ಈ ಕುರಿತು ಒಪ್ಪಂದವನ್ನು ಅಧಿಕೃತಗೊಳಿಸಲಾಗುವುದು ಎಂದು ರಕ್ಷಣಾ ಸಚಿವಾಲಯದ ಮೂಲಗಳು ತಿಳಿಸಿವೆ. ೨೬ ರಫೇಲ್ ಸಾಗರ ಯುದ್ಧ ವಿಮಾನಗಳ ಪೈಕಿ ೨೨ ಏಕ ಆಸನದ ವಿಮಾನಗಳು ಹಾಗೂ ೪ ವಿಮಾನಗಳು ಎರಡು ಆಸನಗಳನ್ನು ಹೊಂದಲಿವೆ. ಇವುಗಳನ್ನು ಭಾರತೀಯ ನೌಕಾಪಡೆಯ ಅವಶ್ಯಕತೆಗೆ ಅನುಗುಣವಾಗಿ ವಿನ್ಯಾಸಗೊಳಿಸಿ ಸಿದ್ಧಪಡಿಸಲಾಗುವುದು. ರಫೇಲ್ ಸಾಗರ ಯುದ್ಧ ವಿಮಾನಗಳ ಸೇರ್ಪಡೆಯೊಂದಿಗೆ ಭಾರತೀಯ ನೌಕಾಪಡೆಯ ಬಲವು ದುಪ್ಪಟ್ಟಾಗಲಿವೆ. ಈ ಯುದ್ಧ ವಿಮಾನಗಳನ್ನು ಐಎನ್‌ಎಸ್ ವಿಕ್ರಮಾಧಿತ್ಯ ಮತ್ತು ಐಎನ್‌ಎಸ್ ವಿಕ್ರಮ್ ನಂತಹ ವಿಮಾನ ವಾಹಕ ನೌಕೆಗಳಲ್ಲಿ ನಿಯೋಜಿಸಲಾಗುವುದು. ರಫೇಲ್ ಸುಧಾರಿತ ಸಶಸ್ತ್ರಾ ವ್ಯವಸ್ಥೆಗಳು ಮತ್ತು ಕ್ಷಿಪಣಿಗಳನ್ನು ಹೊಂದಿರುತ್ತವೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

<><><><>

ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ತಿರುಪತಿ-ಪಕಲಾ-ಕಾಟ್ಪಾಡಿ ಏಕ ಹಳಿ ರೈಲು ಮಾರ್ಗವನ್ನು ಜೋಡಿ ಹಳಿ ರೈಲು ಮಾರ್ಗವಾಗಿ ಪರಿವರ್ತಿಸಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ನಿರ್ಧಾರಗಳ ಕುರಿತು ನವದೆಹಲಿಯಲ್ಲಿಂದು ಮಾಧ್ಯಮಗಳಿಗೆ ಮಾಹಿತಿ ನೀಡಿದ ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ಈ ಯೋಜನೆಯು ವೆಲ್ಲೂರು ಮತ್ತು ತಿರುಪತಿಯ ಶೈಕ್ಷಣಿಕ ಮತ್ತು ವೈದ್ಯಕೀಯ ಕೇಂದ್ರಗಳಿಗೆ ಸಂಪರ್ಕವನ್ನು ಹೆಚ್ಚಿಸುತ್ತದೆ. ಆಂಧ್ರಪ್ರದೇಶದ ಚಿತ್ತೂರು ಮತ್ತು ತಿರುಪತಿ ಜಿಲ್ಲೆಗಳು ಹಾಗೂ ತಮಿಳುನಾಡಿನ ವೆಲ್ಲೂರು ಜಿಲ್ಲೆ ಈ ಯೋಜನೆಯಿಂದ ಪ್ರಯೋಜನ ಪಡೆಯಲಿವೆ. ಈ ಯೋಜನೆಗೆ ಅಂದಾಜು ೧ ಸಾವಿರದ ೩೩೨ ಕೋಟಿ ರೂಪಾಯಿ ವೆಚ್ಚವಾಗಲಿದೆ ಎಂದು ತಿಳಿಸಿದ್ದಾರೆ. ಈ ಯೋಜನೆಯು ಸುಮಾರು ೪೦೦ ಹಳ್ಳಿಗಳು ಮತ್ತು ಸುಮಾರು ೧೪ ಲಕ್ಷ ಜನಸಂಖ್ಯೆಗೆ ಸಂಪರ್ಕವನ್ನು ಹೆಚ್ಚಿಸುತ್ತದೆ. ಕಲ್ಲಿದ್ದಲು, ಕೃಷಿ ಸರಕು, ಸಿಮೆಂಟ್ ಮತ್ತು ಇತರೆ ಖನಿಜಗಳಂತಹ ಸರಕುಗಳ ಸಾಗಣೆಗೆ ಅತ್ಯಗತ್ಯ ಮಾರ್ಗವಾಗಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ಹೇಳಿದರು. ಇದೇ ವೇಳೆ ಒಂದು ಸಾವಿರದ ೮೭೮ ಕೋಟಿ ರೂಪಾಯಿ ವೆಚ್ಚದಲ್ಲಿ ಆರು ಪಥದ ಜಿರಾಕ್‌ಪುರ ಬೈಪಾಸ್ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಪಂಜಾಬ್ ಮತ್ತು ಹರಿಯಾಣದಲ್ಲಿ ವ್ಯಾಪಿಸಿರುವ ಈ ಬೈಪಾಸ್ ಒಟ್ಟು ೧೯.೨ ಕಿಲೋಮೀಟರ್ ಉದ್ದವಿರುತ್ತದೆ. ಈ ಯೋಜನೆಯು

ಪಟಿಯಾಲ, ದೆಹಲಿ, ಮೊಹಾಲಿ ಏರೋಸಿಟಿಯಿಂದ ವಾಹನಗಳ ಸಂಚಾರವನ್ನು ಬೇರೆಡೆಗೆ ತಿರುಗಿಸುವ ಮೂಲಕ ಮತ್ತು ಹಿಮಾಚಲ ಪ್ರದೇಶಕ್ಕೆ ನೇರ ಸಂಪರ್ಕವನ್ನು ಒದಗಿಸುವ ಮೂಲಕ ಜಿರಾಕ್‌ಪುರ, ಪಂಚಕುಲ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಚಾರ ದಟ್ಟಣೆಯನ್ನು ನಿವಾರಿಸಲು ಸಹಾಯ ಮಾಡುತ್ತದೆ ಎಂದು ಅವರು ವಿವರಿಸಿದರು. ಇನ್ನೊಂದೆಡೆ, ಪ್ರಧಾನಮಂತ್ರಿ ಕೃಷಿ ಸಿಂಚಾಯ್ ಯೋಜನೆಯ ಉಪಯೋಜನೆಯಾಗಿ ಕಮಾಂಡ್ ಪ್ರದೇಶಾಭಿವೃದ್ಧಿ ಮತ್ತು ನೀರು ನಿರ್ವಹಣೆಯ ಆಧುನೀಕರಣಕ್ಕೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಒಟ್ಟು ಒಂದು ಸಾವಿರದ ೬೦೦ ಕೋಟಿ ರೂಪಾಯಿಗಳ ಆರಂಭಿಕ ವೆಚ್ಚದ ಈ ಯೋಜನೆಯು ರೈತರು ಹೆಚ್ಚಿನ ಬೆಳೆಯನ್ನು ಬೆಳೆಯಲು ಸಹಾಯ ಮಾಡುತ್ತದೆ. ಕಾಲುವೆಗಳು ಅಥವಾ ಇತರೆ ಮೂಲಗಳಿಂದ ನೀರನ್ನು ಪೂರೈಸಲು ನೀರಾವರಿ ನೀರು ಸರಬರಾಜು ಜಾಲದ ಆಧುನೀಕರಣದ ಗುರಿಯನ್ನು ಈ ಯೋಜನೆ ಹೊಂದಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

<><><><>

ಭಾರತೀಯ ಕಲಾವಿದರಿಗೆ ತಮ್ಮ ವಿಷಯವನ್ನು ರಚಿಸಲು ಮತ್ತು ಅವುಗಳನ್ನು ಜಾಗತಿಕ ವೇದಿಕೆಗೆ ಕೊಂಡೊಯ್ಯಲು ವಿಶ್ವ ದೃಶ್ಯ, ಶ್ರವಣ ಮತ್ತು ಮನರಂಜನಾ ಶೃಂಗಸಭೆ- ವೇವ್ಸ್ ಸಹಕಾರಿ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಖಾಸಗಿ ಸುದ್ದಿ ಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಅವರು, ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯಲ್ಲಿ ಜಗತ್ತು ವೇಗವಾಗಿ ಪ್ರಗತಿ ಸಾಧಿಸಿದಂತೆ ಕಲೆ, ಸಂಗೀತ, ಸಂಸ್ಕೃತಿ ಮತ್ತು ಸೃಜನಶೀಲತೆಯ ಮೇಲೆ ಕೇಂದ್ರೀಕರಿಸುವ ಮಹತ್ವವನ್ನು ಒತ್ತಿ ಹೇಳಿದ ಪ್ರಧಾನಿ, ಮನರಂಜನೆ ಪ್ರಸ್ತುತ ಅತಿದೊಡ್ಡ ಜಾಗತಿಕ ಉದ್ಯಮಗಳಲ್ಲಿ ಒಂದಾಗಿದ್ದು, ಇದರ ವ್ಯಾಪ್ತಿ ಮತ್ತಷ್ಟು ವಿಸ್ತಾರವಾಗಲಿದೆ ಎಂದರು. ಚಲನಚಿತ್ರಗಳು, ಪಾಡ್‌ಕ್ಯಾಸ್ಟ್‌ಗಳು, ಗೇಮಿಂಗ್, ಸಂಗೀತ, ಅಗ್ಯುಮೆಂಟೆಡ್ ರಿಯಾಲಿಟಿ ಮತ್ತು ವರ್ಚುವಲ್ ರಿಯಾಲಿಟಿ ಸೇರಿದಂತೆ ಭಾರತದ ರೋಮಾಂಚಕ ಮತ್ತು ಸೃಜನಶೀಲ ಉದ್ಯಮಗಳ ಬಗ್ಗೆ ಪ್ರಸ್ತಾಪಿಸಿದ ಪ್ರಧಾನಿ, ಈ ಉದ್ಯಮಗಳನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುವ ಗುರಿ ಹೊಂದಿರುವ "ಕ್ರಿಯೇಟ್ ಇನ್ ಇಂಡಿಯಾ" ಉಪಕ್ರಮದ ಬಗ್ಗೆ ಅವರು ಒತ್ತಿ ಹೇಳಿದರು.

<><><><>

ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಹಾಗೂ ವೇವ್‌ಲ್ಯಾಪ್ಸ್ ಸಂಸ್ಥೆಯ ಸಹಯೋಗದೊಂದಿಗೆ ಆಯೋಜಿಸುತ್ತಿರುವ ಎಕ್ಸ್‌ಆರ್ ಕ್ರಿಯೇಟರ್ ಹ್ಯಾಕಥಾನ್, ಮೌಲ್ಯಮಾಪನದ ಅಂತಿಮ ಹಂತ ತಲುಪಿದ್ದು, ವಿಜೇತರಿಗೆ ಬಹುಮಾನ ವಿತರಣೆ ಸಮಾರಂಭ ಇಂದು ನಡೆಯಲಿದೆ. ಈ ಹ್ಯಾಕಥಾನ್ ಮುಂದಿನ ತಿಂಗಳ ೧ ರಿಂದ ೪ ರವರೆಗೆ ಮುಂಬೈನಲ್ಲಿ ನಡೆಯಲಿರುವ ವಿಶ್ವ ದೃಶ್ಯ-ಶ್ರವಣ ಮತ್ತು ಮನರಂಜನಾ ಶೃಂಗಸಭೆ- ವೇವ್ಸ್ ನ ಒಂದು

ಭಾಗವಾಗಿದೆ. ಎಕ್ಸ್ ಆರ್ ಕ್ರಿಯೇಟರ್ ಹ್ಯಾಕಥಾನ್ ವಿಸ್ತೃತ ರಿಯಾಲಿಟಿ ತಂತ್ರಜ್ಞಾನಗಳಲ್ಲಿ ನಾವೀನ್ಯತೆಯನ್ನು ಉತ್ತೇಜಿಸುವ ರಾಷ್ಟ್ರವ್ಯಾಪಿ ಉಪಕ್ರಮವಾಗಿದ್ದು, ದೇಶಾದ್ಯಂತದ ೧೫೦ ಕ್ಕೂ ಹೆಚ್ಚು ನಗರಗಳಿಂದ ೨ ಸಾವಿರದ ೨೦೦ ಕ್ಕೂ ಹೆಚ್ಚು ಭಾಗವಹಿಸುವಿಕೆಯನ್ನು ಕಂಡಿದೆ.

<><><><>

ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಪೋಷಣ್ ಪಾಕ್ಷಿಕದ ೭ನೇ ಆವೃತ್ತಿಯನ್ನು ಆಯೋಜಿಸಿದೆ. ದೇಶಾದ್ಯಂತ ಅಪೌಷ್ಟಿಕತೆ ನಿಭಾಯಿಸುವ ಉದ್ದೇಶದಿಂದ ಈ ಅಭಿಯಾನ ನಡೆಸಲಾಗುತ್ತಿದೆ. ಈ ವರ್ಷದ ಪೋಷಣ್ ಪಾಕ್ಷಿಕ ನಾಲ್ಕು ಪ್ರಮುಖ ವಿಷಯಗಳ ಮೇಲೆ ಕೇಂದ್ರೀಕರಿಸುತ್ತದೆ - ಜೀವನದ ಮೊದಲ ಒಂದು ಸಾವಿರ ದಿನಗಳಲ್ಲಿ ಆರೈಕೆ, ಪೋಷನ್ ಫಲಾನುಭವಿ ಮಾದರಿಯನ್ನು ಜನಪ್ರಿಯಗೊಳಿಸುವ, ಅಪೌಷ್ಟಿಕತೆಯ ಪರಿಣಾಮಕಾರಿ ನಿರ್ವಹಣೆ ಮತ್ತು ಬಾಲ್ಯದ ಸ್ಥೂಲಕಾಯತೆಯನ್ನು ಪರಿಹರಿಸಲು ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸುವ ಗುರಿ ಹೊಂದಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಪ್ರಾರಂಭಿಸಿದ ಪ್ರಮುಖ ಉಪಕ್ರಮವಾದ ಪೋಶನ್ ಅಭಿಯಾನವು ಗರ್ಭಿಣಿಯರು, ಹಾಲುಣಿಸುವ ತಾಯಂದಿರು, ಹದಿಹರೆಯದ ಬಾಲಕಿಯರು ಮತ್ತು ಆರು ವರ್ಷದೊಳಗಿನ ಮಕ್ಕಳಿಗೆ ಪೌಷ್ಠಿಕಾಂಶದ ಫಲಿತಾಂಶಗಳನ್ನು ಸುಧಾರಿಸುವ ಗುರಿ ಹೊಂದಿದೆ. ಈವರೆಗೆ ಪೋಷನ್ ಪಾಕ್ಷಿಕದ ಆರು ಯಶಸ್ವಿ ಆವೃತ್ತಿಗಳನ್ನು ಆಯೋಜಿಸಿದ್ದು, ಇದು ರಾಷ್ಟ್ರೀಯ ಪೌಷ್ಟಿಕಾಂಶ ಅಭಿಯಾನದಡಿ ಜಾಗೃತಿ ಮತ್ತು ಸಮುದಾಯದ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಕೊಡುಗೆ ನೀಡಿದೆ. ನಿನ್ನೆ ಆರಂಭವಾದ ಪೋಷನ್ ಪಾಕ್ಷಿಕ, ಇದೇ ೨೨ ರವರೆಗೆ ನಡೆಯಲಿದೆ.

<><><><>

ಬಿಹಾರದ ಬೇಗುಸರಾಯ್ ಜಿಲ್ಲೆಯಲ್ಲಿ ಇಂದು ಸಿಡಿಲು ಬಡಿದು ಕನಿಷ್ಠ ೮ ಜನರು ಸಾವನಪ್ಪಿದ್ದು, ಹಲವರು ಗಾಯಗೊಂಡಿದ್ದಾರೆ. ಬೇಗುಸರಾಯ್ ಜಿಲ್ಲೆಯ ಬಲಿಯಾ, ಭಗವಾನ್‌ಪುರ, ಮತಿಹಾನಿ ಮತ್ತು ಸಾಹೇಬ್‌ಪುರ ಕಮಲ್ ಪ್ರದೇಶದಲ್ಲಿ ೫ ಜನರು ಮೃತಪಟ್ಟಿದ್ದು, ನಾಲ್ವರು ಗಾಯಗೊಂಡಿದ್ದಾರೆ. ಇದೇ ವೇಳೆ ಮದುಬನಿ ಜಿಲ್ಲೆಯ ಜಂಜರ್‌ಪುರದಲ್ಲಿ ಮನೆಗಳ ಹೊರಗೆ ಕೆಲಸ ಮಾಡುತ್ತಿದ್ದ ಜನರಿಗೆ ಸಿಡಿಲು ಬಡಿದು ಮೂವರು ಸಾವನಪ್ಪಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

<><><><>

ಗುಜರಾತ್‌ನ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿಂದು ನಡೆಯುತ್ತಿರುವ ಇಂಡಿಯನ್ ಪ್ರೀಮಿಯರ್ ಲೀಗ್-ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ಹಾಗೂ ರಾಜಸ್ಥಾನ್ ರಾಯಲ್ಸ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ರಾಜಸ್ಥಾನ್ ರಾಯಲ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

<><><><>

ಪಂಜಾಬ್‌ನ ಗುರುದಾಸ್‌ಪುರ ಸೆಕ್ಟರ್‌ನಲ್ಲಿ ನಿನ್ನೆ ತಡರಾತ್ರಿ ಗಡಿ ಭದ್ರತಾ ಪಡೆ -ಬಿಎಸ್‌ಎಫ್ ಮತ್ತು ರೈತರನ್ನು ಗುರಿಯಾಗಿಸಿಕೊಂಡು ನಡೆಸಲು ಯೋಜಿಸಿದ್ದ ದೊಡ್ಡ ಸ್ಫೋಟವನ್ನು ತಡೆಯುವಾಗ ಬಿಎಸ್‌ಎಫ್ ಸಿಬ್ಬಂದಿಯೊಬ್ಬರು ಗಾಯಗೊಂಡಿದ್ದಾರೆ. ಭಾರತ-ಪಾಕಿಸ್ತಾನ ಗಡಿಯಲ್ಲಿ ಗಸ್ತು ತಿರುಗುತ್ತಿದ್ದ ವೇಳೆ ಬಿಎಸ್‌ಎಫ್ ತಂಡವು ಭಾರತದ ಪ್ರದೇಶಗಳಿಗೆ ಅನುಮಾನಸ್ಪಾದ ವಸ್ತುಗಳನ್ನು ಪತ್ತೆ ಮಾಡಿದಾಗ ಈ ಘಟನೆ ಸಂಭವಿಸಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>